# ಮೌನದಿಂದ ಮುಂಚೂಣಿಗೆ ಸ್ವಾತಂತ್ರ್ಯ ಹೋರಾಟದ ಪಯಣದಲ್ಲಿ ಬೆಳಗಾವಿ ಜಿಲ್ಲೆಯ ಪಾತ್ರ

**ನಾಗರಾಜ ಎಸ್. ಬೆಳಗಾಂವಕರ[1] & ಗಣಪತಿ ಗೌಡ ಎಸ್.[2]**

[1]ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು ಹಂಪನಕಟ್ಟಾ, ಮಂಗಳೂರು.

[2]ಪ್ರಾಧ್ಯಾಪಕರು, ಇತಿಹಾಸ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು ಹಂಪನಕಟ್ಟಾ, ಮಂಗಳೂರು.

DOI: https://doi.org/10.5281/zenodo.17411576

## ABSTRACT:

ಭಾರತದ ಸ್ವಾತಂತ್ರ್ಯ ಚಳುವಳಿಯು ದೇಶದ ಪ್ರತಿಯೊಂದು ಭಾಗದಲ್ಲೂ ತನ್ನದೇ ಆದ ವಿಶಿಷ್ಟ ರೂಪದಲ್ಲಿ ಬೆಳವಣಿಗೆಯಾಯಿತು. ಕರ್ನಾಟಕವೂ ಈ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದ್ದು, ಅದರೊಳಗಿನ ಬೆಳಗಾವಿ ಜಿಲ್ಲೆಯು ರಾಷ್ಟ್ರ ಭಾವನೆ, ಕ್ರಾಂತಿಸ್ಫೂರ್ತಿ ಮತ್ತು ಜನಜಾಗೃತಿಯ ಕೇಂದ್ರವಾಗಿತ್ತು. ಮಹಿಳೆಯರಿಂದ ವಿದ್ಯಾರ್ಥಿಗಳವರೆಗೆ, ರೈತರಿಂದ ಕಾರ್ಮಿಕರವರೆಗೆ ಎಲ್ಲರೂ ಸ್ವಾತಂತ್ರ್ಯದ ಕನಸಿಗಾಗಿ ತ್ಯಾಗಮಯ ಹೋರಾಟ ನಡೆಸಿದರು. ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಕರ್ನಾಟಕದ ವಿಶೇಷವಾಗಿ ಬೆಳಗಾವಿ ಜಿಲ್ಲೆ ಅತ್ಯಂತ ಪ್ರಮುಖ ಪಾತ್ರವಹಿಸಿದೆ. 1757 ಮತ್ತು 1764ರ ಪ್ಲಾಸಿ ಮತ್ತು ಬಕ್ಸಾರ್ ಕದನಗಳ ಪರಿಣಾಮದಿಂದ ಬ್ರಿಟಿಷ್ ಸಾಮ್ರಾಜ್ಯ ಭಾರತದಲ್ಲಿ ಭದ್ರವಾಗಿ ನೆಲೆಯೂರಿತು. ನಂತರ ವಿವಿಧ ಕಾಯ್ದೆಗಳ ಮೂಲಕ ಭಾರತೀಯರನ್ನು ಗುಲಾಮರನ್ನಾಗಿಸಿದ್ದನ್ನು ಕಾಣುತ್ತೇವೆ. ಇಂತಹ ಪರಿಸ್ಥಿತಿಯಲ್ಲಿ 1857ರಲ್ಲಿ ಜರುಗಿದ ದಂಗೆಯು ಭಾರತೀಯರಲ್ಲಿ ಸ್ವಾತಂತ್ರ್ಯದ ಕಿಚ್ಚನ್ನು ಹೊತ್ತಿಸಿದ್ದನ್ನು ಕಾಣುತ್ತೇವೆ. ಈ 1857ರ ದಂಗೆಯು ವಿವಿಧ ಸ್ತರಗಳಲ್ಲಿ ಬದಲಾಗುತ್ತಾ ದೇಶಾದ್ಯಂತ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ದದ ಹೋರಾಟಕ್ಕೆ ಪ್ರೇರಣಾ ಶಕ್ತಿಯಾಗಿ ಮಾರ್ಪಟ್ಟಿತು. ಬ್ರಿಟಿಷರ ಶೋಷಣಾತ್ಮಕ ಆಡಳಿತದ ವಿರುದ್ಧ ಜನರಲ್ಲಿ ಹುಟ್ಟಿದ ಅಸಮಾಧಾನ, ಅಹಿಂಸಾ ಮತ್ತು ಸತ್ಯಾಗ್ರಹದ ತತ್ವಗಳಿಂದ ಪ್ರೇರಿತವಾಗಿ ಸಂಘಟಿತ ಚಳುವಳಿಯಾಗಿ ರೂಪಾಂತರಗೊಂಡಿತು. ಬೆಳಗಾವಿ ಜಿಲ್ಲೆಯು ರಾಜಕೀಯ ಹಾಗೂ ಸಾಮಾಜಿಕ ಜಾಗೃತಿಯ ಕೇಂದ್ರವಾಗಿದ್ದು, ಅಸಹಕಾರ ಚಳುವಳಿ, ಖಾದಿ ಚಳುವಳಿ, ಉಪ್ಪಿನ ಸತ್ಯಾಗ್ರಹ ಮತ್ತು ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿತು. ಬೆಳಗಾವಿ ಜಿಲ್ಲೆಯ ಮಹಿಳೆಯರು, ಸ್ವಾತಂತ್ರ್ಯ ಹೋರಾಟಗಾರರು ರಾಷ್ಟ್ರಸೇವೆಯಲ್ಲಿ ಪ್ರಮುಖ ಪಾತ್ರವಹಿಸಿ ಖಾದಿ ತಯಾರಿಕೆ, ಸಭೆ ಸಮಾವೇಶಗಳಲ್ಲಿ ಭಾಗವಹಿಸುವ ಮೂಲಕ ಸಮಾಜದ ಪರಿವರ್ತನೆಗೆ ಕಾರಣರಾದರು. ಈ ಲೇಖನವು ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಪಯಣವನ್ನು ಪರಿಚಯಿಸಿ, ಅದರ ಯಶಸ್ಸಿಗೆ ಕಾರಣರಾದ ಹೋರಾಟಗಾರರನ್ನು ಪರಿಚಯಿಸಿ, ಇಂದಿನ ಅವರ ಪ್ರಸ್ತುತತೆಯನ್ನು ಸ್ಮರಿಸುವುದಾಗಿದೆ.

## KEYWORDS:

ಸ್ವಾತಂತ್ರ್ಯ ಹೋರಾಟ, ರಾಷ್ಟ್ರೀಯತೆ, ಮಹಿಳೆಯರು, ವಿದ್ಯಾರ್ಥಿಗಳು, ಪತ್ರಿಕೆಗಳು.

**ಪರಿಚಯ:**

ಭಾರತದ ಸ್ವಾತಂತ್ರ್ಯ ಹೋರಾಟವು ಕೇವಲ ರಾಜಕೀಯ ಚಳುವಳಿ ಮಾತ್ರವಲ್ಲ, ಅದು ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಪರಿವರ್ತನೆಯಾಗಿತ್ತು. ದೇಶದ ವಿವಿಧ ಭಾಗಗಳಲ್ಲಿ ನಡೆದ ಹೋರಾಟಗಳು ಪರಸ್ಪರ ಪ್ರೇರಣೆಯಾಗಿ, ಭಾರತೀಯರ ಮನಸ್ಸಿನಲ್ಲಿ ಸ್ವಾಭಿಮಾನ ಮತ್ತು ಸ್ವತಂತ್ರತೆಯ ಚೈತನ್ಯವನ್ನು ತುಂಬಿದವು. ಕರ್ನಾಟಕವೂ ಈ ಹೋರಾಟದ ಪಯಣದಲ್ಲಿ ತನ್ನದೇ ಆದ ವಿಶಿಷ್ಟ ಗುರುತನ್ನು ಮೂಡಿಸಿಕೊಂಡಿತು. ವಿಶೇಷವಾಗಿ ಬೆಳಗಾವಿ ಜಿಲ್ಲೆ ಭಾರತೀಯ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಚಿರಸ್ಥಾಯಿ ಸ್ಥಾನ ಪಡೆದಿದೆ. ಇಲ್ಲಿ ನಡೆದ ಬ್ರಿಟಿಷ್ ವಿರೋಧಿ ಚಳುವಳಿಗಳು, ನಾಯಕರು ಮತ್ತು ಜನಜಾಗೃತಿಯ ಕಾರ್ಯಗಳು ರಾಷ್ಟ್ರ ನಿರ್ಮಾಣವನ್ನು ಬಲಪಡಿಸಿದವು.

ಬ್ರಿಟಿಷರ ದೌರ್ಜನ್ಯ, ಶೋಷಕ ತೆರಿಗೆ ನೀತಿಗಳು ಮತ್ತು ಸಾಮಾಜಿಕ ಅನ್ಯಾಯದ ವಿರುದ್ಧ ಜನರಲ್ಲಿ ಆಕ್ರೋಶದ ಅಲೆ ಎದ್ದಿತ್ತು. ಈ ಅಲೆ ಕ್ರಮೇಣ ಸಂಘಟಿತ ಚಳುವಳಿಯಾಗಿ ಬೆಳೆಯಿತು. ಗಾಂಧೀಜಿಯ ಅಹಿಂಸಾತ್ಮಕ ಮತ್ತು ಸತ್ಯಾಗ್ರಹದ ಚಿಂತನೆ ಸ್ವಾತಂತ್ರ್ಯ ಹೋರಾಟಕ್ಕೆ ಗಟ್ಟಿ ನಾಯಕತ್ವ ದೊರೆಯಿತು. ಈ ಪ್ರದೇಶದ ಜನರು ಪ್ರಾರಂಭದಲ್ಲಿ ಮೌನದಿಂದಲೇ ಅಸಮಾಧಾನವನ್ನು ವ್ಯಕ್ತಪಡಿಸುತ್ತಿದ್ದರು, ಆದರೆ ಕಾಲಾಂತರದಲ್ಲಿ ಅವರು ಕ್ರಿಯಾಶೀಲ ಹೋರಾಟಗಾರರಾಗಿ ಮುಂಚೂಣಿಗೆ ಬಂದರು. ಸ್ವಾತಂತ್ರ್ಯ ಚಳುವಳಿಯ ಪಯಣವು ಬೆಳಗಾವಿ ಜಿಲ್ಲೆಯ ಜನರನ್ನು ಮೌನದಿಂದ ಕಿಚ್ಚಿನ ಹೋರಾಟಗಾರರನ್ನಾಗಿ ಬದಲಾಯಿಸಿತು. ಹೀಗಾಗಿ ಬೆಳಗಾವಿಯ ಹೋರಾಟ ಭಾರತದ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಕೇವಲ ಒಂದು ಅಧ್ಯಾಯವಲ್ಲ, ಅದು ರಾಷ್ಟ್ರಾಭಿಮಾನ, ಬಲಿದಾನ ಮತ್ತು ಸಮಾನತೆಯ ಸಂಕೇತವಾಗಿದೆ. ಸ್ವಾತಂತ್ರ್ಯ ಹೋರಾಟವು ನಮ್ಮ ಸಮಾಜದಲ್ಲಿ ಸಾಮಾಜಿಕ, ಧಾರ್ಮಿಕ, ಆರ್ಥಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿ ಉಂಟುಮಾಡಿದ ಪರಿಣಾಮಗಳಿಗೆ ಚಳುವಳಿಯ ವ್ಯಾಪ್ತಿಯನ್ನು ಅರಿತಾಗಲೇ ಉತ್ತರ ಸಿಗುತ್ತದೆ.

**ಹಿನ್ನೆಲೆ:**

ಕೇವಲ ವ್ಯಾಪಾರದ ಉದ್ದೇಶಕ್ಕಾಗಿ ಬಂದ ಈಸ್ಟ್ ಇಂಡಿಯಾ ಕಂಪನಿ ಅಧಿಕಾರಿಗಳು ನಂತರದ ಅವಧಿಯಲ್ಲಿ ಅಸಮಾನತೆ, ಆರ್ಥಿಕ ಶೋಷಣೆ ಮತ್ತು ಸಾಮಾಜಿಕ ಅನ್ಯಾಯದ ಮೂಲಕ ಭಾರತೀಯರನ್ನು ಶೋಷಿಸಿದರು. 19ನೇ ಶತಮಾನದಲ್ಲಿ ಬ್ರಿಟಿಷರು ವಿಧಿಸಿದ ತೆರಿಗೆ ನೀತಿಗಳು, ವಾಣಿಜ್ಯ ನಿಯಂತ್ರಣ ಮತ್ತು ಸ್ಥಳೀಯ ಆಡಳಿತದ ಮೇಲಿನ ಹಿಡಿತ ಜನರಲ್ಲಿ ಅಸಮಾಧಾನ ಹುಟ್ಟಿಸಿತು. ಈ ಅಸಮಾಧಾನವೇ ಕ್ರಮೇಣವಾಗಿ ರಾಷ್ಟ್ರಭಾವನೆಗೆ ಕಾರಣವಾಯಿತು. ಕರ್ನಾಟಕದ ಬೆಳಗಾವಿ ಜಿಲ್ಲೆಯ ಜನರು ಶಿಕ್ಷಣ, ಪತ್ರಿಕಾ ಚಟುವಟಿಕೆ ಮತ್ತು ಸಾಮಾಜಿಕ ಸಂಘಟನೆಗಳ ಮೂಲಕ ಜಾಗೃತಿ ಪಡೆದುಕೊಂಡಿದ್ದರು. ಮಹಾತ್ಮಾ ಗಾಂಧೀಜಿಯ ಅಹಿಂಸಾತತ್ವ, ಸ್ವದೇಶಿ ಚಿಂತನೆ ಮತ್ತು ಸತ್ಯಾಗ್ರಹದ ಮಾರ್ಗ ಬೆಳಗಾವಿಯ ಜನಮನದಲ್ಲಿ ಆಳವಾದ ಪ್ರಭಾವ ಬೀರಿತು. 1924ರ ಬೆಳಗಾವಿಯಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ಹೋರಾಟದ ಪ್ರೇರಣೆಗೆ ಬಲವಾದ ವೇದಿಕೆಯಾಯಿತು. ಸ್ವಾತಂತ್ರ್ಯ ಹೋರಾಟಗಾರರನ್ನು ಒಗ್ಗೂಡಿಸುವಲ್ಲಿ ಪತ್ರಿಕೆ, ಪುಸ್ತಕ(ವಾಚನಾಲಯ), ಹರಿಕಥೆ, ಲಾವಣಿ, ನಾಟಕಗಳಂತಹ ಸಾಧನಗಳು ವಹಿಸಿದ ಪಾತ್ರ ಉಲ್ಲೇಖನೀಯವಾಗಿದೆ.

ಸಾ.ಶ 1600 ರಲ್ಲಿ ವ್ಯಾಪಾರಿಗಳಾಗಿ ಆಗಮಿಸಿ ನಂತರ ಆಂಗ್ಲೋಫ್ರೆಂಚ್(ಕಾರ್ನಾಟಿಕ್) ಕದನಗಳು, ಪ್ಲಾಸಿ, ಬಕ್ಸಾರ್, ಆಂಗ್ಲೋ ಮೈಸೂರು ಯುದ್ಧಗಳು, ಆಂಗ್ಲೋ ಮರಾಠಾ ಯುದ್ಧಗಳು, ಆಂಗ್ಲೋ ಸಿಖ್ ಕದನಗಳು, ಆಂಗ್ಲೋ ಮೈಸೂರು ಕದನಗಳು, ಮತ್ತು ವಿವಿಧ

ನೀತಿಗಳಾದ ದತ್ತು ಮಕ್ಕಳಿಗೆ ಹಕ್ಕಿಲ್ಲ, ಸಹಾಯಕ ಸೈನ್ಯ ಪದ್ಧತಿಯ ಮೂಲಕ ಭಾರತವನ್ನು ಹಂತ ಹಂತವಾಗಿ ತಮ್ಮ ನಿಯಂತ್ರಣದಲ್ಲಿಡಿಸಿ ನೇರವಾಗಿ(ಗವರ್ನರ್ ಜನರಲ್ ಮೂಲಕ) ಮತ್ತು ಪರೋಕ್ಷವಾಗಿ(ಭಾರತೀಯ ಅರಸರನ್ನು ನಿರ್ದೇಶಿಸುವ ಮೂಲಕ) ಆಡಳಿತ ನಡೆಸಿದರು. ಅವರು ಪರಿಚಯಿಸಿದ ಭೂಕಂದಾಯ ನೀತಿಗಳಿಂದ ಉದಯಿಸಿದ ಜಮೀನ್ದಾರಿ ವರ್ಗ, ಕೈಗಾರಿಕಾ ನೀತಿ, ವ್ಯಾಪಾರ ವಾಣಿಜ್ಯ ನೀತಿ ಇವೆಲ್ಲವುಗಳು ಭಾರತೀಯ ರೈತರು, ಕುಶಲಕರ್ಮಿಗಳು ಮತ್ತು ಕಾರ್ಮಿಕರನ್ನು ಭೂರಹಿತರನ್ನಾಗಿ ಮತ್ತು ನಿರುದ್ಯೋಗಿಗಳನ್ನಾಗಿ ಮಾಡಿದವು. ಸುಮಾರು ನೂರು ವರ್ಷಗಳ ಕಾಲ ಆಳ್ವಿಕೆ ನಡೆಸಿದ ಬ್ರಿಟಿಷರ ವಿರುದ್ಧ 1857ರಲ್ಲಿ ನಡೆದ ದಂಗೆಯು ಭಾರತೀಯರಿಗೆ ಹೋರಾಟದ ಅಡಿಪಾಯವನ್ನು ಹಾಕಿತು. ನಂತರ 1885ರಲ್ಲಿ ಸ್ಥಾಪನೆಯಾದ ರಾಷ್ಟ್ರೀಯ ಕಾಂಗ್ರೆಸ್‌ನಿAದ ಪ್ರಾರಂಭವಾದ ಹೋರಾಟದ ತೀವ್ರತೆಯು 1947ರಲ್ಲಿ ಸ್ವಾತಂತ್ರ್ಯ ದೊರಕುವಂತೆ ಮಾಡಿತು.

**ಉದ್ದೇಶಗಳು:**

- ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ, ವಿಶೇಷವಾಗಿ ಬೆಳಗಾವಿ ಜಿಲ್ಲೆಯ ಪ್ರಮುಖ ಪಾತ್ರವನ್ನು ತಿಳಿಸುವುದು.
- ಬೆಳಗಾವಿಯ ಸ್ವಾತಂತ್ರ್ಯ ಹೋರಾಟಗಾರರನ್ನು ಪರಿಚಯಿಸುವುದು.
- ಮಹಿಳೆಯರ ಪಾಲ್ಗೊಳ್ಳುವಿಕೆ ಹಾಗೂ ಅವರ ನಾಯಕತ್ವದ ಮಹತ್ವವನ್ನು ಪ್ರಸ್ತುತಪಡಿಸುವುದು

**ಸಾಹಿತ್ಯಿಕ ಕೃತಿಗಳ ಅವಲೋಕನ:**

- ಡಾ. ಸೂರ್ಯನಾಥ ಕಾಮತ್ ರವರ ಸಂಪಾದಕತ್ವದಲ್ಲಿ ಪ್ರಕಟವಾದ "ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು" ಎಂಬ ತೃತೀಯ ಸಂಪುಟದ ಪುಟ ಸಂಖ್ಯೆ 437 ರಿಂದ 453 ರವರೆಗೆ ಬೆಳಗಾವಿ ಜಿಲ್ಲೆಯ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರ ಸಂಕ್ಷಿಪ್ತ ಪರಿಚಯವನ್ನು ನೀಡಲಾಗಿದೆ. ಈ ಕೃತಿಯ ಮೊದಲ ಮುದ್ರಣವು 1980ರಲ್ಲಿ ಆಗಿರುವುದರಿಂದ ಒಟ್ಟು ನಾಲ್ಕು ದಶಕಗಳು ಕಳೆದಿವೆ. ಈ ಕೃತಿಯಲ್ಲಿ ಲೇಖಕರು ಮಾಜಿ ಬ್ರಿಟಿಷ್ ಜಿಲ್ಲೆಗಳು ಎಂಬ ವಿಷಯ ಸೂಚಿಯಲ್ಲಿ ಒಟ್ಟು ಏಳು (ಉತ್ತರ ಕನ್ನಡ, ಕೊಡಗು, ದಕ್ಷಿಣ ಕನ್ನಡ, ಧಾರವಾಡ, ಬಳ್ಳಾರಿ, ಬೆಳಗಾವಿ ಮತ್ತು ವಿಜಾಪುರ) ಜಿಲ್ಲೆಗಳ ಸ್ವಾತಂತ್ರ್ಯ ಹೋರಾಟಗಾರರ ಕುರಿತು ಚರ್ಚಿಸಿದ್ದಾರೆ. ಹಾಗೆಯೇ ಮಾಜೀ ಸಂಸ್ಥಾನಿ ಪ್ರದೇಶಗಳು ಮತ್ತು ಕಿರು ಸಂಸ್ಥಾನಗಳು ಎಂಬ ವಿಷಯ ಸೂಚಿಯಲ್ಲಿ ಇತರೆ ಜಿಲ್ಲೆಗಳ ಸ್ವಾತಂತ್ರ್ಯ ಹೋರಾಟಗಾರರ ಕುರಿತು ವಿವರಿಸಿದ್ದಾರೆ.
- ಡಾ. ಎಮ್. ವಿ. ಕೃಷ್ಣರಾವ್ ಮತ್ತು ಜಿ. ಎಸ್. ಹಾಲಪ್ಪ ರವರ ಸಂಪಾದಕತ್ವದಲ್ಲಿ ಹೊರಬಂದ "ಹಿಸ್ಟರಿ ಆಫ್ ಫ್ರೀಡಂ ಮೂವಮೆಂಟ್ ಇನ್ ಕರ್ನಾಟಕ" ಸಂಪುಟ 1 ಮತ್ತು 2 ರಲ್ಲಿ ಬ್ರಿಟಿಷರನ್ನು ವಿರೋಧಿಸಿದ ಮೊದಲ ಭಾರತೀಯ ಮಹಿಳೆ ಕಿತ್ತೂರು ಚನ್ನಮ್ಮಳ ಕುರಿತಾದ ಲೇಖನ, ಸ್ವಾತಂತ್ರ್ಯ ಯೋಧನಾಗಿ ಸಂಗೊಳ್ಳಿ ರಾಯಣ್ಣನ ಕುರಿತಾದ ಲೇಖನ, ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಮಾಹಿತಿ ಮತ್ತು ರಾಷ್ಟ್ರೀಯತೆಯಲ್ಲಿ ಪತ್ರಿಕೆಗಳ ಪಾತ್ರದಲ್ಲಿ 1857ಕ್ಕಿಂತ ಮುಂಚೆ ಕನ್ನಡ ಮಾತನಾಡುವ ಪ್ರದೇಶಗಳಲ್ಲಿ ಯಾವುದೇ ಸುದ್ದಿ ಪತ್ರಿಕೆಗಳು ಇರಲಿಲ್ಲವೆಂದು 1954 ರ ಪ್ರೆಸ್ ಕಮಿಷನ್ ವರದಿಯಲ್ಲಿ ಉಲ್ಲೇಖಿಸಲಾಗಿದೆ.

- ಎಲ್. ಎಸ್. ಶಾಸ್ತ್ರಿ ರವರ "ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ" ಈ ಸಂಕ್ಷಿಪ್ತ ಪುಸ್ತಕದಲ್ಲಿ ಭಾರತದಲ್ಲಿ ಪ್ರಾರಂಭವಾದ ಸ್ವಾತಂತ್ರ್ಯ ಚಳುವಳಿಯ ಮಾಹಿತಿ, ಕರ್ನಾಟಕದಲ್ಲಿ ಚಳುವಳಿಯ ತೀವ್ರತೆಯಲ್ಲಿ ಶಿವಪುರ ಸತ್ಯಾಗ್ರಹ, ಈಸೂರು ಪ್ರಕರಣ, ಜಂಗಲ್ ಸತ್ಯಾಗ್ರಹ, ಮತ್ತು ಗಾಂಧೀಜಿ ಬಂಧನದ ಜೊತೆಗೆ ವಿವಿಧ ಪ್ರಮುಖ ಹೋರಾಟಗಾರರನ್ನು ಪ್ರದೇಶವಾರು ತಿಳಿಸುವ ಕಾರ್ಯ ಮಾಡಿದ್ದಾರೆ. ಚಲೇಜಾವ್ ಚಳುವಳಿಯಲ್ಲಿ ಬಾಲಕರ ಸಾಹಸ ರೈಲ್ವೆ ಸ್ಟೇಷನ್‌ಗೆ ಬೆಂಕಿ ಹಚ್ಚಿದರ ಬಗ್ಗೆ ವಿವರಿಸಿದ್ದಾರೆ.
- ಡಾ. ಎಸ್ ನಾಗರತ್ನಮ್ಮ ರವರ "ಕರ್ನಾಟಕದಲ್ಲಿ ಅಸಹಕಾರ ಮತ್ತು ನಾಗರಿಕ ಕಾನೂನು ಭಂಗ ಚಳುವಳಿ" ಎಂಬ ಪುಸ್ತಕದಲ್ಲಿ ಗಾಂಧೀಜಿಯವರ ರಚನಾತ್ಮಕ ಕಾರ್ಯಗಳು, ಸ್ವದೇಶಿ ಚಳುವಳಿ, ಖಾದಿ ಪ್ರಚಾರ, ಬೆಳಗಾವಿ ಕಾಂಗ್ರೆಸ್ ಅಧಿವೇಶನ, ಉಪ್ಪಿನ ಸತ್ಯಾಗ್ರಹದಲ್ಲಿ ಬೆಳಗಾವಿ, ಕಿತ್ತೂರು, ನಿಪ್ಪಾಣಿ, ಚಿಕ್ಕೋಡಿ, ನಂದಗಡಗಳಿಂದ ಸತ್ಯಾಗ್ರಹಿಗಳು ಅಂಕೋಲದತ್ತ ಹೊರಟ ಮಾಹಿತಿಯನ್ನು ಉಲ್ಲೇಖಿಸುತ್ತಾರೆ. ಬೆಳಗಾವಿ ಜಿಲ್ಲೆಯ ಯಾದವಾಡ, ಮುರಗೋಡಹಳ್ಳಿ, ಕುಂದರನಾಡು, ನೇಗಿನಹಾಳಗಳ ಉಪ್ಪಿನ ನೀರಿನ ಬಾವಿಗಳಿಂದ ನೀರನ್ನು ತಂದು ಉಪ್ಪು ತಯಾರು ಮಾಡಿ ಉಪ್ಪಿನ ಕಾಯಿದೆ ಭಂಗ ಮಾಡಿದರು. ಗೋಕಾಕ್‌ನಲ್ಲಿ ಗುರುಮಾಸ್ತರರು ಉಪ್ಪಿನ ಸತ್ಯಾಗ್ರಹದಲ್ಲಿ ಪ್ರಮುಖ ಪಾತ್ರವಹಿಸಿರುವ ಕುರಿತಾದ ಮಾಹಿತಿ ನೀಡಿದ್ದಾರೆ.
- ವೈ. ರು. ಪಾಟೀಲ(ಸವದತ್ತಿ ) ರವರ "ಸ್ವಾತಂತ್ರ್ಯ ಚಳುವಳಿಗೆ ಕನ್ನಡತಿಯರ ಕೊಡುಗೆ" ಸಂಪುಟ1 ರಲ್ಲಿ ಸುಮಾರು 162 ಮಹಿಳೆಯರ ಸಂಕ್ಷಿಪ್ತ ಪರಿಚಯವನ್ನು ನೀಡಿದ್ದಾರೆ ಅವರಲ್ಲಿ ಬೆಲಗಾವಿ ಜಿಲ್ಲೆಗೆ ಸಂಬಂಧಿಸಿದವರಲ್ಲಿ ಸುಮಾರು 25 ಮಹಿಳೆಯರ ಕಿರು ಪರಿಚಯವನ್ನು ನೀಡಿದ್ದಾರೆ.
- ಎಸ್. ವಾಯ್ ಮುಗಳಿ ರವರ "Freedom Movement in Bombay Karnataka – A Historiographical Critique" ಎಂಬ ಸಂಶೋಧನಾ ಲೇಖನದಲ್ಲಿ ಸ್ವಾತಂತ್ರ್ಯ ಚಳುವಳಿಗೆ ಸಂಬಂಧಿಸಿದಂತೆ ಅದರಲ್ಲೂ ಬಾಂಬೆ ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿಗೆ ಸಂಬಂಧಿಸಿದ ಕೃತಿಗಳನ್ನು ಅವಲೋಕಿಸಿದ್ದಾರೆ. ಅವುಗಳಲ್ಲಿ
  - » History of Freedom Movement in Karnataka (1962) Vol. I.7 by M.V. Krish–na Rao and G.S. Halappa.
  - » The History of Freedom Movement in Karnataka: (1964) (VolII) Ed. by G.S. Halappa.
  - » Economic life in the Bombay Karnataka (18181939) (1963) by R.D. Choksey.
  - » Historical Writings on the Nationalist Movement in India – Karnataka: (1977) (Article) by K.R. Basavarajachar.
  - » 'Karnataka Charitre' (19001956) (Vol. VIII) Ed. By S. Chandrashekhar, etc.

  ಪ್ರಮುಖವಾಗಿವೆ.
- ಎ. ಬಿ. ವಗ್ಗರ್ ರವರ ಪಿ. ಹೆಚ್. ಡಿ ಪ್ರಬಂಧವಾದ "ಮುಂಬಯಿ ಕರ್ನಾಟಕದ ಸಂಸ್ಥಾನಗಳಲ್ಲಿ ಸ್ವಾತಂತ್ರ್ಯ ಹೋರಾಟ" ಇದರಲ್ಲಿ ಬಾಂಬೆ ಕರ್ನಾಟಕದ ಸಂಸ್ಥಾನಗಳಲ್ಲಿ ನಡೆದ ಬ್ರಿಟಿಷ್ ವಿರೋಧಿ ದಂಗೆಗಳು ಮತ್ತು ಸ್ವಾತಂತ್ರ್ಯ ಚಳುವಳಿಯ ಕುರಿತು ವಿವರಿಸಲಾಗಿದೆ.

- ಡಾ. ಮಹಾಲಿಂಗ ಕೆ. ರವರ "ಸಾಮಾಜಿಕ ಚಳುವಳಿಗಳು" ಎಂಬ ಪುಸ್ತಕದಲ್ಲಿ ಒಟ್ಟು ಆರು ಅಧ್ಯಾಯಗಳಿದ್ದು ಇವುಗಳಲ್ಲಿ ಮೂರನೆ ಅಧ್ಯಾಯದಲ್ಲಿ ಕರ್ನಾಟಕದಲ್ಲಿ ಸಾಮಾಜಿಕ ಚಳುವಳಿಗಳು ಒಂದು ಅಧ್ಯಯನ ಎಂಬ ಶೀರ್ಷಿಕೆಯಲ್ಲಿ ಗೋಕಾಕ್ ಚಳುವಳಿಯನ್ನು ವಿವರಿಸಿದ್ದಾರೆ. ಸ್ವಾತಂತ್ರ್ಯಾನಂತರ ಪ್ರಾರಂಭವಾದ ಈ ಚಳುವಳಿಯು ಸ್ವಾತಂತ್ರ್ಯ ಚಳುವಳಿಯಿಂದ ಸ್ಫೂರ್ತಿ ಪಡೆದು ಯಶಸ್ವಿಯಾಯಿತು. ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನ ವಿಧಾನಗಳು ಪರಿಚಯವಾಗಬೇಕಾದರೆ ಆ ಪ್ರದೇಶದ ಭಾಷೆಯ ಮೂಲಕವೇ ಸಾಧ್ಯ ಎಂಬ ಸಂದೇಶವನ್ನು ಈ ಚಳುವಳಿ ಸಾಬಿತುಪಡಿಸಿತು.
- ಡಾ. ಎಲ್. ಪಿ. ಮಾರುತಿ ರವರ "ಬ್ರಿಟೀಷ್ ವಿರೋಧಿ ಜನಾಂದೋಲನಗಳು" ಎಂಬ ಪುಸ್ತಕವು ಒಟ್ಟು ನಾಲ್ಕು ಅಧ್ಯಾಯಗಳನ್ನು ಒಳಗೊಂಡಿದೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ಅಸಹಕಾರ ಚಳುವಳಿಯ ಯಶಸ್ವಿಯಿಂದಾಗಿ ಜನರಲ್ಲಿ ರಾಷ್ಟ್ರೀಯ ಪ್ರಜ್ಞೆ ಬೆಳೆಯಿತು. ಅನಕ್ಷರಸ್ಥರಿಗೂ ಗಾಂಧೀಜಿಯವರ ತತ್ವಗಳು ಪರಿಚಯಿಸಿ ಚಳುವಳಿಯಲ್ಲಿ ಜನರ ಭಾಗವಹಿಸುವಿಕೆಯನ್ನು ಕಾಣಬಹುದು.
- ಸ. ರಾ. ಸುಳಕೊಡೆ ರವರ ಸಂಪಾದಕತ್ವದಲ್ಲಿ "ಕಿತ್ತೂರು ಕಲಿಗಳು ಮತ್ತು ಸ್ವಾತಂತ್ರ್ಯ ಸಂಗ್ರಾಮ(ಸ್ವಾತಂತ್ರ್ಯ ಸಂಗ್ರಾಮದ ಹೆಜ್ಜೆಗಳ ಕಥನ ಸಂಗ್ರಹ)" ಎರಡು ಭಾಗಗಳಲ್ಲಿ ಪ್ರಕಟವಾದ ಈ ಪುಸ್ತಕದಲ್ಲಿ ಒಂದನೆ ಭಾಗವು ಕಿತ್ತೂರು ಸಂಸ್ಥಾನದ ಕುರಿತು, ರಾಣಿ ಚನ್ನಮ್ಮಳ ಕುರಿತು, ಸಂಗೊಳ್ಳಿ ರಾಯಣ್ಣನ ಕುರಿತು ಮತ್ತು ಸ್ವಾತಂತ್ರ್ಯ ಹೋರಾಟಗಾರ ದೇವೇಂದ್ರ ಬಸ್ತವಾಡ ಮತ್ತು ಪದ್ಮಾಬಾಯಿಯವರು ಹೀಗೆ ವಿವಿಧ ಶೀರ್ಷಿಕೆಗಳನ್ನು ಸಂಗ್ರಹಿಸಿ ಸಂಪಾದಿಸಿದ್ದಾರೆ. ಎರಡನೆ ಭಾಗದಲ್ಲಿ ಜನಪದ ಗೀತೆ, ಲಾವಣಿ, ಕವಿತೆಗಳ ಮೂಲಕ ಕಿತ್ತೂರಿನ ಇತಿಹಾಸ ಮತ್ತು ಹೋರಾಟಗಾರರನ್ನು ಪರಿಚಯಿಸುವ ಪ್ರಯತ್ನ ಮಾಡಿದ್ದಾರೆ.

**ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು:**

**ಬಸವಪ್ರಭು ಕೋರೆ:** ಇವರು ಬೆಳಗಾವಿಯ ಚಿಕ್ಕೋಡಿ ತಾಲೂಕಿನ ಅಂಕಲಿ ಗ್ರಾಮದವರು. ಇವರು ಒಬ್ಬ ಸ್ವಾತಂತ್ರ್ಯ ಹೋರಾಟಗಾರ, ಸಹಕಾರ ಮತ್ತು ಶಿಕ್ಷಣ ರಂಗದ ಚಿಂತಕರಾಗಿದ್ದರು. ಅವರು ಸ್ವಾತಂತ್ರ್ಯ ಹೋರಾಟಗಾರರಿಗೆ ಆಶ್ರಯ ನೀಡುವ ಮೂಲಕ ಹೋರಾಟದ ರೂಪುರೇಷೆಗಳನ್ನು ರೂಪಿಸಿದರು. ಹೋರಾಟಗಾರರ ಅಡ್ಡೆ ಬಸವಪ್ರಭು ಕೋರೆ ಮನೆಯಾಗಿತ್ತು. ಸ್ವಾತಂತ್ರ್ಯ ಸೇನಾನಿಗಳಿಗೆ ಆರ್ಥಿಕವಾಗಿ ಬೆಂಗಾವಲಾಗಿದ್ದ ಕೋರೆ ಹೋರಾಟಗಾರರ ಕುಟುಂಬ ನಿರ್ವಹಣೆಗೂ ನೆರವಾಗಿದ್ದರು. ಮನೆಯಲ್ಲಿ ಶ್ರೀಮಂತಿಕೆ, ಮನದಲ್ಲಿ ಸ್ವಾತಂತ್ರ್ಯ ಹೋರಾಟದ ಕಿಚ್ಚು. ಹೀಗಾಗಿಯೇ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ್ದ ಸೇನಾನಿಗಳನ್ನು ಒಟ್ಟುಗೂಡಿಸಿ ತಮ್ಮ ತೋಟದಲ್ಲೇ ಅವರಿಗೆ ಆಶ್ರಯ ನೀಡಿದ್ದರು. ಗಾಂಧೀಜಿ ಅನುಯಾಯಿಯಾಗಿದ್ದ ಅವರು ಎಳೆ ವಯಸ್ಸಿನಲ್ಲೇ ಹೋರಾಟಕ್ಕೆ ಧುಮುಕಿ ಹೋರಾಟಗಾರರಿಗೆ ಸಭೆ ನಡೆಸಲು ತಮ್ಮ ಮನೆ ಮತ್ತು ತೋಟಗಳನ್ನು ಕಾರ್ಯಕ್ಷೇತ್ರವನ್ನಾಗಿ ಮಾರ್ಪಾಡು ಮಾಡಿದ್ದರು. ಹರಿಜನ ಪತ್ರಿಕೆಗೆ ಆರ್ಥಿಕ ಸಹಾಯ ಮಾಡಿದರು. ಆದ್ದರಿಂದ ಅಂಕಲಿಯನ್ನು 'ಕೋರೆ ಅಂಕಲಿ' ಎಂದು ಪ್ರಸಿದ್ಧಿ ಹೊಂದಿತ್ತು.

**ಗಂಗಾಧರರಾವ್ ದೇಶಪಾಂಡೆ:** ಕರ್ನಾಟಕದ ಸಿಂಹ ಎಂದು ಪ್ರಸಿದ್ಧರಾಗಿದ್ದ ಇವರು ಬೆಳಗಾವಿಯ ಹುದಲಿಯಲ್ಲಿ ಜನಿಸಿದ್ದು ಹೆಚ್ಚಿನ ಶಿಕ್ಷಣವನ್ನು ಪುಣೆಯಲ್ಲಿ ಪಡೆದರು.

ಅಲ್ಲಿಯೇ ಬಾಲಗಂಗಾಧರ ತಿಲಕರ ಪ್ರಭಾವಕ್ಕೆ ಒಳಗಾಗಿದ್ದರು. ತಿಲಕ್ ಮತ್ತು ಗಾಂಧಿಯವರ ಆಪ್ತ ಸಹವರ್ತಿಯಾಗಿ, ಅವರು ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ಸಂಘಟಿಸಿದರು. 1921ರಲ್ಲಿ ಕರ್ನಾಟಕ ಪ್ರಾಂತ್ಯ ಸಮಿತಿಯ ಅಧ್ಯಕ್ಷರಾಗಿ ಆಯ್ಕೆಯಾದರು ಮತ್ತು 1921ರಲ್ಲಿಯೇ ರಾಜದ್ರೋಹದ ಆರೋಪದ ಮೇಲೆ ಜೈಲುವಾಸ ಅನುಭವಿಸಿದರು. 'ಖಾದಿ ಭಗೀರಥ' ಎಂಬ ಬಿರುದಿನಂತೆ, ಅವರು ಖಾದಿ ಚಳುವಳಿಯನ್ನು ಉತ್ತೇಜಿಸಲು ಹಳ್ಳಿಯಿಂದ ಹಳ್ಳಿಗೆ ಪ್ರಚಾರ ಮಾಡಿದರು. 'ಚಲೇಜಾವ್' ಚಳುವಳಿಯಲ್ಲಿಯೂ ಭಾಗವಹಿಸಿದ್ದಕ್ಕಾಗಿ 1942 ರಿಂದ 1944 ರವರೆಗೆ ನಾಸಿಕ್ ಕಾರಾಗೃಹದಲ್ಲಿ ರಾಜಕೀಯ ಕೈದಿಯಾಗಿ ಬಂಧನದಲ್ಲಿದ್ದರು.

**ಅಣ್ಣುಗುರೂಜಿ:** ಬೆಳಗಾವಿ ಜಿಲ್ಲೆಯ ಪಾಶ್ಚಾಪುರದವರಾದ ಇವರು 19231926ರವರೆಗೆ ರಾಷ್ಟ್ರೀಯ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದರಿಂದ ಗುರೂಜಿ ಎಂದು ಕರೆಯಲಾಗುತ್ತಿತ್ತು. ಅವರ ಕುಟುಂಬದ ಸದಸ್ಯರು ಅವರನ್ನು ಪ್ರೀತಿಯಿಂದ ಅಣ್ಣಾ ಎಂದು ಕರೆಯುತ್ತಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿಯವರ ತತ್ವಗಳನ್ನು ಪಾಲಿಸುತ್ತಾ ಸ್ವರಾಜ್ಯ ಚಳುವಳಿಯಲ್ಲಿ ಭಾಗವಹಿಸುವುದರ ಜೊತೆಗೆ ಸ್ವಾತಂತ್ರ್ಯ ಹೋರಾಟಕ್ಕಾಗಿ ಜಿಲ್ಲೆಯಿಂದ ಜಿಲ್ಲೆಗೆ ಸಂಚರಿಸುವ ಮೂಲಕ ಜನರಲ್ಲಿ ಹೋರಾಟದ ಜಾಗೃತಿಯನ್ನು ಉಂಟುಮಾಡಿದರು. 1930 ರಿಂದ 1942 ರವರೆಗಿನ ಪ್ರತಿಯೊಂದು ಪ್ರತಿಭಟನೆ, ಪ್ರದರ್ಶನ, ಮೆರವಣಿಗೆ ಮುಂದಾಳತ್ವವನ್ನು ವಹಿಸಿದ್ದರು. 193031ರ ಉಪ್ಪಿನ ಸತ್ಯಾಗ್ರಹ, 193233ರ ಮದ್ಯದಂಗಡಿಗಳ ಮುಷ್ಕರ, ಬ್ರಿಟಿಷ್ ಸರಕುಗಳ ಬಹಿಷ್ಕಾರದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಚಳುವಳಿಯನ್ನು ತಣ್ಣಗಾಗಿಸಲು ಬ್ರಿಟಿಷ್ ಸರಕಾರವು ಜಿಲ್ಲೆಯ ಚಳುವಳಿಯ ಐದು ಮಂದಿ ಧುರೀಣರನ್ನು ಗುರುತಿಸಿ ಹಿಡಿದು ಕೊಟ್ಟವರಿಗೆ ಐದು ಸಾವಿರ ರೂ.ಗಳ ಬಹುಮಾನವನ್ನು ಘೋಷಿಸಿತ್ತು. ಅಣ್ಣುಗುರೂಜಿಯವರ ನಂಬಿಗಸ್ಥ ಚಿದಂಬರ ಬೆಟಗೇರಿಯವರು ಐದು ಸಾವಿರ ಬಹುಮಾನದಿಂದ ತನ್ನ ಸಹೋದರಿಯ ಮದುವೆ ಮಾಡಬಹುದೆಂದು ಅಣ್ಣುಗುರೂಜಿಯವರನ್ನು ವಿಜಾಪುರಕ್ಕೆ ಕರೆದೊಯ್ದು ಮೋಸದಿಂದ ಬಂಧಿಸುವಂತೆ ಮಾಡಿ ಶಿಕ್ಷೆ ಮತ್ತು ಜೈಲುವಾಸವನ್ನು ಅನುಭವಿಸಿದರು.

**ಭರಮು ಎಸ್. ಪಾಟೀಲ:** ಬೆಳಗಾವಿಯ ನಿಪ್ಪಾಣಿಯವರಾದ ಇವರು ಗಾಂಧೀಜಿಯವರ ಹೋರಾಟಗಳು, ಚಳುವಳಿಗಳು ಮತ್ತು ಸತ್ಯಾಗ್ರಹಗಳಿಂದ ಪ್ರೇರಿತರಾಗಿ ಚಳುವಳಿಯಲ್ಲಿ ಭಾಗವಹಿಸಿದರು. ನಿಪ್ಪಾಣಿ ಭಾಗದಲ್ಲಿನ ಹೋರಾಟಕ್ಕೆ ಬಂದಂತಹ ಜನರಿಗೆ ರಹಸ್ಯವಾಗಿ ಊಟವನ್ನು ಒದಗಿಸುತ್ತಿದ್ದರು. ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿ ಭಾಗದ ಕಛೇರಿಗಳ ಮೇಲೆ ಹಲ್ಲೆ ಮಾಡಿ ಸಂಪರ್ಕ ತಂತಿಗಳನ್ನು ನಾಶಗೊಳಿಸುತ್ತಿದ್ದರು. ಜೈಲಿನಿಂದ ಬಿಡುಗಡೆಗೊಂಡ ನಂತರ ಬ್ರಿಟಿಷರು ಊರಿನಲ್ಲಿದ್ದ ಜನರಿಗೆ ಅವರ ಮನೆ ಕಡೆಗೆ ಹೋಗದಂತೆ ಜನರಿಗೆ ಬೆದರಿಕೆ ಇರಿಸುತ್ತಿದ್ದರು. ಒಂದು ದಿನದಲ್ಲಿ ಮೂರು ಬಾರಿ ಸಹಿ ಮಾಡಬೇಕಾಗಿತ್ತು. ಅತ್ಯಂತ ಕಿರುಕುಳ ನೀಡಿ ಬೆತ್ತಲೆ ಮಾಡಿ ಚರ್ಮದ ಬೆಲ್ಟ್ ನಿಂದ ಹೊಡೆಯುವ ಶಿಕ್ಷೆಯನ್ನು ನೀಡುತ್ತಿದ್ದರೆಂದು ಅವರು ನೀಡಿದ ಸಂದರ್ಶನದಲ್ಲಿ ತಿಳಿಸುತ್ತಾರೆ.

**ಯಾಳಗಿ ಕುಟುಂಬ:** ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಬೆಳಗಾವಿಯಿಂದ ಗಣನೀಯ ಕೊಡುಗೆ ನೀಡಿದ ಕುಟುಂಬವಾಗಿದೆ. ಈ ಕುಟುಂಬದ ಗೋವಿಂದರಾವ್ ಯಾಳಗಿ ಅವರು ಬ್ರಿಟಿಷ್ ಆಡಳಿತದ ವಿರುದ್ಧದ ಪ್ರತಿಭಟನೆಯಲ್ಲಿ ಸಕ್ರಿಯರಾಗಿದ್ದರು, ಹಾಗೂ 1905ರಲ್ಲಿ ವಿದೇಶಿ ಬಟ್ಟೆ ಸುಡುವ ಚಳುವಳಿಯಲ್ಲಿ ಭಾಗವಹಿಸಿ ಜೈಲು ಸೇರಿದ್ದರು. ಅವರೊಂದಿಗೆ ಅವರ ಕುಟುಂಬದ ಒಟ್ಟು 16 ಸದಸ್ಯರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ, ಬ್ರಿಟಿಷ್ ಆಡಳಿತದ ವಿರುದ್ಧ ವಿವಿಧ ಚಳುವಳಿಗಳಲ್ಲಿ ಪಾಲ್ಗೊಂಡು ಜೈಲು ಶಿಕ್ಷೆ ಅನುಭವಿಸಿದ್ದಾರೆ.

ವಿಠಲರಾವ್ ಯಾಳಗಿ ಸೇರಿದಂತೆ ಕುಟುಂಬದ ಅನೇಕ ಸದಸ್ಯರ ಜೈಲು ಶಿಕ್ಷೆ ಅನುಭವಿಸಿದ್ದಾರೆ.

**ಇತರೆ ಸ್ವಾತಂತ್ರ್ಯ ಹೋರಾಟಗಾರರು:** ಬಾಳಜಿ ಯಾಮಾಜಿ ದೇಶಪಾಂಡೆ, ವೆಂಕಟರೆಡ್ಡಿ ಹೂಲಿ, ಬಾಬುರಾವ್ ಕಾಮತ್, ಆರ್. ಎಚ್. ಕುಲಕರ್ಣಿ, ತಿಪ್ಪಣ್ಣಾ ಬೆಟಗೇರಿ, ಶಿವರಾಯಪ್ಪ ಇಟ್ಟನ್ನವರ, ಇಮಾಮಸಾಹೇಬ ಮುಲ್ಲಾ, ಮರೆಪ್ಪ ಕಮ್ಮಾರ, ಶಂಕರೆಪ್ಪಾ ಕಮತಗಿ, ದೇವೇಂದ್ರಪ್ಪಾ ಬಸ್ತವಾಡ, ದತ್ತಾತ್ರಯ ನಿಂಬಾಳಕರ, ಗಣಪತಿ ಚಿಕೋರ್ಡೆ ಚಂದೂಲಾಲ ಜತ್ರಟಕರ(ಕೋಠಡಿಯಾ), ಅಪ್ಪಣ್ಣಗೌಡ ಪಾಟೀಲ ಮುಂತಾದವರು

ಜನವರಿ 2025 ರಂತೆ ಸ್ವಾತಂತ್ರ್ಯ ಹೋರಾಟಗಾರರ ಪಿಂಚಣಿ ಪಡೆಯುತ್ತಿರುವ ಮಾಹಿತಿಯನ್ನು 07.03.2025 ರಂದು ಕರ್ನಾಟಕ ಸರ್ಕಾರದ ಅಧಿಕೃತ ಜಾಲತಾಣದಲ್ಲಿ ಮಾಹಿತಿಯನ್ನು ಪ್ರಕಟಿಸಿತು ಈ ಮಾಹಿತಿಯನ್ವಯ ಸ್ವಾತಂತ್ರ್ಯ ಹೋರಾಟಗಾರರು ಪಿಂಚಣಿ ಪಡೆಯುತ್ತಿರುವ ಮಾಹಿತಿಯನ್ನು ಜಿಲ್ಲಾವಾರು ನೀಡಲಾಗಿದೆ.

1. ಬಾಗಲಕೋಟೆ(46)
2. ಬೆಳಗಾವಿ(516)
3. ಬೀದರ(43)
4. ಬೆಂಗಳೂರು ಗ್ರಾಮಾಂತರ(30)
5. ಬೆಂಗಳೂರು ನಗರ(30)
6. ಚಾಮರಾಜನಗರ(21)
7. ಚಿಕ್ಕಬಳ್ಳಾಪುರ(30)
8. ಚಿಕ್ಕಮಗಳೂರು(33)
9. ಚಿತ್ರದುರ್ಗ(87)
10. ದಕ್ಷಿಣಕನ್ನಡ(07)
11. ದಾವಣಗೆರೆ(118)
12. ಧಾರವಾಡ(285)
13. ಗದಗ(29)
14. ಹಾಸನ(40)
15. ಹಾವೇರಿ(59)
16. ಕಲಬುರ್ಗಿ(92)
17. ಕೊಡಗು(03)
18. ಕೋಲಾರ(26)
19. ಕೊಪ್ಪಳ(49)
20. ಮಂಡ್ಯ(41)
21. ಮೈಸೂರು(62)
22. ರಾಯಚೂರು(11)
23. ರಾಮನಗರ(34)
24. ಶಿವಮೊಗ್ಗ(111)
25. ತುಮಕೂರು(180)
26. ಉಡುಪಿ(12)
27. ಉತ್ತರಕನ್ನಡ(43)
28. ವಿಜಯಪುರ(12)
29. ಯಾದಗಿರಿ(16)

ಒಟ್ಟು 29 ಜಿಲ್ಲೆಗಳ ಮಾಹಿತಿಯ ಪ್ರಕಾರ ಬೆಳಗಾವಿ ಜಿಲ್ಲೆಯಲ್ಲಿ ಅತಿ ಹೆಚ್ಚಿನ ಸ್ವಾತಂತ್ರ್ಯ ಹೋರಾಟಗಾರರು(ಪುರುಷರು 41, ಮಹಿಳೆಯರು 475) ಪಿಂಚಣಿ

ಪಡೆಯುತ್ತಿರುವುದು ಕಂಡುಬರುತ್ತದೆ. ಇಲ್ಲಿ ನೀಡಿರುವ ಮಾಹಿತಿಯನ್ವಯ ಪುರುಷ ಸ್ವಾತಂತ್ರ್ಯ ಹೋರಾಟಗಾರರ ಪೈಕಿ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರ ಪಿಂಚಣಿಯನ್ನು ಪಡೆಯುತ್ತಿದ್ದಾರೆ ಅಂದರೆ ಈ ಮಹಿಳೆಯರು ಪುರುಷ ಸ್ವಾತಂತ್ರ್ಯ ಹೋರಾಟಗಾರರ ಪತ್ನಿಯರಾಗಿರಬಹುದು.

ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ಕುರಿತು ನಿಖರವಾದ ಮಾಹಿತಿಯನ್ನು ಪಡೆಯಲು ಮಾಹಿತಿ ಹಕ್ಕಿನ ಸೌಲಭ್ಯದಡಿಯಲ್ಲಿ ದಿನಾಂಕ: 23.06.2024 ರಂದು ಆನ್‌ಲೈನ್ ಮುಖಾಂತರ ಮಾಹಿತಿಯನ್ನು ಪಡೆಯಲು ವಿನಂತಿಯನ್ನು ಸಲ್ಲಿಸಲಾಗಿತ್ತು. ವಿವಿಧ ಹಂತಗಳನ್ನು ದಾಟಿ ದಿನಾಂಕ: 17.07.2025 ರಂದು ಬೆಳಗಾವಿ ಜಿಲ್ಲಾಧಿಕಾರಿ ಕಾರ್ಯಾಲಯದಿಂದ ಸಾರ್ವಜನಿಕ ಮಾಹಿತಿ ಅಧಿಕಾರಿಯು ಸಲ್ಲಿಸಿರುವ ಮಾಹಿತಿಯ ಪ್ರಕಾರ ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರಾಗಿ ಪಿಂಚಣಿ ಪಡೆಯುತ್ತಿರುವವರ ಮಾಹಿತಿಯಲ್ಲಿ ಒಟ್ಟು 30 ಸ್ವಾತಂತ್ರ್ಯ ಹೋರಾಟಗಾರರ ಮಾಹಿತಿಯನ್ನು ಹಂಚಿಕೊಂಡಿರುತ್ತಾರೆ. ಇದರನ್ವಯ

» ಅಥಣಿಯಲ್ಲಿ ಧನವಂತ ಹಲಂಗಲಿ(103).
» ಬೈಲಹೊಂಗಲ ತಾಲೂಕಿನಲ್ಲಿ ಬಸಪ್ಪ ದೊಡಮನಿ(92).
» ಬೆಳಗಾವಿ ತಾಲೂಕಿನಲ್ಲಿ ವಿಠ್ಠಲ ಯಾಳಗಿ(96), ಅಪ್ಪಣ್ಣ ಕಲಭಾವಿ(87), ರಾಜೇಂದ್ರ ಕಲಘಟಗಿ(105), ಮುಕುಂದ ಸುತಾರ(94), ಗಣಪತಿ ಮಕಾಟೆ(97), ರಾಮಚಂದ್ರ ದಿಕ್ಷಿತ್(100), ಕಲ್ಲಪ್ಪ ಗೋಯಿಲ್ಕರ್(93), ಮಲ್ಲಿಕಾರ್ಜುನ್ ದೊಡವಾಡ(85), ಬಸಪ್ಪ ಬಂಟಿಗೊಳ(92), ಅರ್ಜುನ ಪಟೇಲ(90).
» ಚಿಕ್ಕೋಡಿ ತಾಲೂಕಿನಲ್ಲಿ ಗುರುಬಸಯ್ಯ ಹಿರೇಮಠ(98).
» ಗೋಕಾಕ್‌ನಲ್ಲಿ ಅಪ್ಪಣ್ಣ ಕರಿಲಿಂಗಣ್ಣವರ(97), ಪರಸಪ್ಪ ಘಂಟಿಚೋರ್(96), ರಾಮಪ್ಪ ಹಟ್ಟಿ(91).
» ಖಾನಾಪುರ ತಾಲೂಕಿನಲ್ಲಿ ಈಶ್ವರ ಚನ್ನನವರ(86).
» ರಾಮದುರ್ಗ ತಾಲೂಕಿನಲ್ಲಿ ಬಸಪ್ಪ ತಿಮ್ಮನಹಳ್ಳಿ(88).
» ರಾಯಬಾಗ ತಾಲೂಕಿನಲ್ಲಿ ಗೌಸ್ ಮೊಮಿನ್(84).
» ಸವದತ್ತಿ ತಾಲೂಕಿನಲ್ಲಿ ಭೀಮರಾಯಪ್ಪ ಸೂಳೆಬಾವಿ(80), ಯಲ್ಲಪ್ಪ ಕೋಟಿ(97), ಗಂಗನಗೌಡ ಪಾಟೀಲ(80), ದ್ಯಾಮಪ್ಪ ಸುತಗಟ್ಟಿ(97), ಮಾನಿಂಗಪ್ಪ ಗುಂಡ್ಲುರ(102), ಸಿದ್ದಪ್ಪ ಅಜ್ಜನವರ(82), ಫಕೀರಸಾಬ್ ನದಾಪ(97), ಕಾಶವ್ವಾ ಕೆಡೆನ್ನವರ(80), ದೇವರೆಡ್ಡಿ ರೈನಾಪೂರ(84), ಕಲ್ಲೊಲೆಪ್ಪ ಮೇಟಿ(85), ಮಹಬೂಬಸಾಬ್ ಬಿಜಲಿಖಾನ(84).

**ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ:**

ಭಾರತದ ಸ್ವಾತಂತ್ರ್ಯ ಹೋರಾಟವು ಪುರುಷರಷ್ಟೇ ಮಹಿಳೆಯರ ಶೌರ್ಯ, ತ್ಯಾಗ ಮತ್ತು ದೇಶಭಕ್ತಿಯುಳ್ಳ ಪಾತ್ರದಿಂದ ಕೂಡಿದೆ. ಬೆಳಗಾವಿ ಜಿಲ್ಲೆಯ ಮಹಿಳೆಯರು ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಕುಟುಂಬ, ಆಸ್ತಿ ಹಾಗೂ ಜೀವನವನ್ನೇ ಬಲಿಯಾಗಿ ನೀಡಿದರು. ಅವರ ಶೌರ್ಯಗಾಥೆಗಳು ಇಂದಿಗೂ ಪ್ರೇರಣೆಯಾಗಿ ನಿಲ್ಲುತ್ತವೆ. ಬೆಳಗಾವಿಯ ಮಹಿಳೆಯರಲ್ಲಿ ರಾಷ್ಟ್ರಭಕ್ತಿಯ ಉತ್ಸಾಹವನ್ನು ಮೂಡಿಸಲು ಮಾಹಾತ್ಮಾ ಗಾಂಧೀಜಿ, ಲೋಕಮಾನ್ಯ ತಿಲಕ್,

ಸ್ಥಳೀಯ ನಾಯಕರಾದ ಗೋವಿಂದ ಪಾನಸರೆ, ಶಿವರಾಯ ಪಾಟೀಲ, ಗಂಗಾಧರ ರಾವ್ ದೇಸಾಯಿ ಮುಂತಾದವರ ಪ್ರಭಾವ ಮುಖ್ಯವಾಗಿತ್ತು. ರಾಣಿ ಚನ್ನಮ್ಮಳ ತ್ಯಾಗ ಬಲಿದಾನವನ್ನು ಸ್ಫೂರ್ತಿಯಾಗಿ ಪಡೆದ ಬೆಳಗಾವಿಯ ಮಹಿಳೆಯರಲ್ಲಿ ಕಸ್ತೂರಬಾ ಖಾದಿರೆ, ಸುನಂದಾ ಪಾಟೀಲ, ಲಕ್ಷ್ಮೀಬಾಯಿ ದೇಸಾಯಿ, ಪಾರ್ವತೀಬಾಯಿ ಹಿರೇಮಠ, ಗೋವಿಂದಮ್ಮಾ ಕಟ್ಟಿಮನಿ, ಲಕ್ಷ್ಮೀಬಾಯಿ ಸೋಹನಿ, ಶಾಂತಾಬಾಯಿ ಕೊಪ್ಪಳ, ತುಳಸಾಬಾಯಿ ಆನೆಖಿಂಡಿ, ಕಾಶಿಬಾಯಿ ಗದ್ರೆ, ಅತ್ಯಾಬಾಯಿ ಮೋಡಕ ಮತ್ತು ಲಕ್ಷ್ಮೀಬಾಯಿ ದಾತಾರ ಅವರು ಸ್ತ್ರೀಯರಲ್ಲಿ ಅಪೂರ್ವ ಜಾಗೃತಿಯನ್ನುಂಟುಮಾಡಿದ್ದರು.

1942ರ ಚಲೇಜಾವ್ ಚಳುವಳಿಯಲ್ಲಿ ಆಗಸ್ಟ್ 9ರಂದು ಭಾಷಣ ಮಾಡಿದಕ್ಕಾಗಿ ಇಂದುಮತಿ ಗುಣಾಜಿ ಅವರನ್ನು ಬಂಧಿಸಿ ಒಂದೂವರೆ ವರ್ಷದ ಶಿಕ್ಷೆ ವಿಧಿಸಲಾಯಿತು. ಶಕುಂತಲಾ ಧಾಮಣಕರ ಮತ್ತು ಪ್ರಮೀಳಾಬಾಯಿ ದೇಶಪಾಡೆ ಅವರ ನೇತೃತ್ವದಲ್ಲಿ ವಿದ್ಯಾರ್ಥಿನಿಯರು ಬುಲೆಟಿನ್ ಹಂಚುವುದು, ಪ್ರಭಾತಫೇರಿ, ಧ್ವಜವಂದನೆ, ಸಾಮುದಾಯಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಸ್ವಾತಂತ್ರ್ಯಾಕಾಂಕ್ಷೆಯನ್ನು ಜಾಗೃತವಾಗಿಸಿದರು. ಇಂಥಹ ಕಾರ್ಯಕ್ರಮಗಳಲ್ಲಿ ವಸುಂಧರಾ ನಾಯಿಕ, ಗೋದಾವರಿ ಸೋಲಾಪುರಕರ, ಕುಸುಮ ಪೈ, ಸುಮಂತಾ ಕಾಮತ, ಸುಶೀಲಾ ತೆಂಡೋಲಕರ, ಕಮಲ ಘಾಟಕ, ವಿಮಲ ಘಾಟಕ, ಅನಸೂಯಾ ಸಾಮಂತ ಶಾಲಿನಿ ಜಾಂಬೋಟಕರ, ಪ್ರಭಾವತಿ ಸಾಮಂತ, ಅರುಂಧತಿ ಕಾಮತ, ಮಾಲತಿ ವೇಲಂಗಿ, ಗಂಗೂ ಘಾರೆ, ಭೀಮಾ ಸಾಮಂತ, ಅಹಲ್ಯಾ ಸಾಮಂತ, ಸುಮತಿ ಬೋಂದ್ರೆ, ಸೀತಾಬಾಯಿ ಕುಲಕರ್ಣಿ, ಮಂದಾ ಯಾಳಗಿ, ಇಂದಿರಾಬಾಯಿ ಲೋಖಂಡೆ, ಸೋನುಬಾಯಿ ದೇಶಪಾಂಡೆ, ಇಂದುಮತಿ ಪಾರ್ಟೋಳೆ ಮೊದಲಾದ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರು ಕಾರಾಗೃಹವನ್ನು ಕಂಡರು. ಶ್ರೀಮತಿ ಶಾಂತಾಬಾಯಿ ಮಠದ, ಲಕ್ಷ್ಮೀಬಾಯಿ ಕುಲಕರ್ಣಿ, ಸಂಗವ್ವಾ ಬಾಳೇಕುಂದ್ರಿ ಸೀತಾಬಾಯಿ ಪ್ರಭು, ಸುಭದ್ರಾಬಾಯಿ ಯಕ್ಕುಂಡಿ ಮೊದಲಾದ ಅನೇಕ ಮಹಿಳೆಯರು ಬುಲೆಟಿನ್ ಹಂಚುವುದು, ಪ್ರಭಾತಫೇರಿ, ಸಾಯಂಫೇರಿ ತೆಗೆಯುವುದು, ಘೋಷಣೆ ಮಾಡುವುದು ಮೊದಲಾದ ಕಾರ್ಯಕ್ರಮ ಮಾಡಿ ಬಂಧನಕ್ಕೊಳಗಾದರು. 1942ರ ಡಿಸೆಂಬರ್‌ನಲ್ಲಿ ಹಿಂಡಲಗ ಜೈಲಿನಲ್ಲಿ ಗ್ಯಾಸ್ಟ್ರೋ ಎಂಟ್ರಾಯಟಿಸ್ ಎಂಬ ರೋಗವು ಉದ್ಭವಿಸಿತು. ವಾಂತಿಭೇದಿ ಆಗಿ ಕೈದಿಗಳು ಸಾಯತೊಡಗಿದರು. ಪುಣೆಯ ಶ್ರೀಮತಿ ಬಾಳಾ. ನಿಪ್ಪಾಣಿಯ ಗಂಗೂಬಾಯಿ ಕಿನರೆ ಈ ರೋಗದಿಂದ ಜೈಲಿನಲ್ಲಿ ತೀರಿಕೊಂಡರು.

1930ರ ದಶಕದಲ್ಲಿ ಬೆಳಗಾವಿಯ ಮಹಿಳೆಯರು ಉಪ್ಪಿನ ಸತ್ಯಾಗ್ರಹ, ವಿದೇಶಿ ವಸ್ತ್ರಗಳ ಬಹಿಷ್ಕಾರ ಮತ್ತು ಪ್ರಭಾತ ಫೇರಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಕೆಲವು ವೇಳೆ ಪೊಲೀಸರು ಇವರ ಮೇಲೆ ಲಾಠಿಚಾರ್ಜ್ ನಡೆಸಿದರೂ, ಇವರು ಹಿಂದೆ ಸರಿಯಲಿಲ್ಲ. ಬೆಳಗಾವಿಯ ಸುನಂದಾ ಪಾಟೀಲ ಅವರು ಸ್ಥಳೀಯ ಮಹಿಳೆಯರನ್ನು ಸಂಘಟಿಸಿ 'ಮಹಿಳಾ ಸಂಘ' ಎಂಬ ಚಳುವಳಿಯನ್ನು ರೂಪಿಸಿದರು. ಅವರ ನೇತೃತ್ವದಲ್ಲಿ ಮಹಿಳೆಯರು ಖಾದಿ ತಯಾರಿಸಿ ವಿದೇಶಿ ವಸ್ತ್ರಗಳನ್ನು ದಹನ ಮಾಡಿದರು. ಪಾರ್ವತಿಬಾಯಿ ಹಿರೇಮಠ ಅವರು ಅಂದಿನ ಬ್ರಿಟಿಷ್ ಅಧಿಕಾರಿಗಳ ವಿರೋಧದ ನಡುವೆಯೂ ದೇಶಭಕ್ತಿ ಹಾಡುಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದರು. ಲಕ್ಷ್ಮೀಬಾಯಿ ದೇಸಾಯಿ ಯುವಕರಿಗೆ ರಾಷ್ಟ್ರಪ್ರೇಮದ ಪಾಠ ಬೋಧಿಸಿ ಸತ್ಯಾಗ್ರಹ ಚಳುವಳಿಗೆ ಧೈರ್ಯ ತುಂಬಿದರು. ಅವರ ಮನೆಯನ್ನು ಗಾಂಧೀಯ ಚಿಂತನೆಯ ಕೇಂದ್ರವಾಗಿ ಬಳಸಲಾಗುತ್ತಿತ್ತು. ಗೋವಿಂದಮ್ಮಾ ಕಟ್ಟಿಮನಿ ಅವರು ಸಾಮಾಜಿಕ ನ್ಯಾಯ ಮತ್ತು ಮಹಿಳಾ ಹಕ್ಕುಗಳ ಪರ ಹೋರಾಡಿ ಸ್ವಾತಂತ್ರ್ಯ ಹೋರಾಟಕ್ಕೆ

ಮಹಿಳೆಯರ ಪ್ರಾತಿನಿಧ್ಯವನ್ನು ಒದಗಿಸಿದರು. ಬೆಳಗಾವಿಯ ಮಹಿಳೆಯರ ಈ ತ್ಯಾಗ ಮತ್ತು ಬದ್ಧತೆಯು ದೇಶದ ಸ್ವಾತಂತ್ರ್ಯ ಚಳುವಳಿಗೆ ನೂತನ ಶಕ್ತಿ ನೀಡಿತು. ಅವರು ಕೇವಲ ರಾಜಕೀಯ ಹೋರಾಟಗಾರ್ತಿಯರಷ್ಟೇ ಅಲ್ಲದೆ ಸಾಮಾಜಿಕ ಸುಧಾರಣೆಯ ನಾಯಕಿಯರಾಗಿ ಸಹ ಗುರುತಿಸಿಕೊಂಡರು. ಅವರ ಕಾರ್ಯಗಳಿಂದ ಗ್ರಾಮೀಣ ಮಹಿಳೆಯರಲ್ಲಿ ರಾಷ್ಟ್ರಸೇವೆಯ ಮನೋಭಾವ ಬೆಳೆಯಿತು. ಸ್ವಾತಂತ್ರ್ಯ ನಂತರವೂ ಈ ಮಹಿಳೆಯರು ಸಮಾಜ ಸೇವೆ, ಶಿಕ್ಷಣ ಮತ್ತು ಮಹಿಳಾ ಸಬಲೀಕರಣ ಕ್ಷೇತ್ರಗಳಲ್ಲಿ ಕೆಲಸ ಮುಂದುವರೆಸಿದರು. ಅವರು ಬೆಳೆಸಿದ ರಾಷ್ಟ್ರಭಕ್ತಿಯ ಬೀಜಗಳು ಇಂದಿಗೂ ಬೆಳಗಾವಿಯ ಸಂಸ್ಕೃತಿಯಲ್ಲಿ ಜೀವಂತವಾಗಿವೆ.

**ಉಪಸಂಹಾರ:**

ಭಾರತದ ಸ್ವಾತಂತ್ರ್ಯ ಹೋರಾಟವು ಅನೇಕ ಪ್ರಾಂತಗಳು, ಜನಾಂಗಗಳು ಮತ್ತು ವರ್ಗಗಳ ಒಗ್ಗಟ್ಟಿನ ಚಳುವಳಿಯಾಗಿದೆ. ಈ ಸುದೀರ್ಘ ಪಯಣದಲ್ಲಿ ಕರ್ನಾಟಕವು ತನ್ನ ವೈಶಿಷ್ಟ್ಯಪೂರ್ಣ ಪಾತ್ರವನ್ನು ನಿರ್ವಹಿಸಿದೆ. ವಿಶೇಷವಾಗಿ ಬೆಳಗಾವಿ ಜಿಲ್ಲೆಯು ರಾಷ್ಟ್ರಪ್ರೇಮ, ಧೈರ್ಯ ಮತ್ತು ತ್ಯಾಗದ ಸಂಕೇತವಾಗಿ ಇತಿಹಾಸದಲ್ಲಿ ಅಮರವಾಗಿದೆ. ಈ ಜಿಲ್ಲೆಯ ಹೋರಾಟಗಾರರು 'ಮೌನದಿಂದ ಮುಂಚೂಣಿಗೆ' ಎಂಬ ನುಡಿಯಂತೆಯೇ ಆರಂಭದಲ್ಲಿ ಶಾಂತ, ಆದರೆ ನಂತರ ತೀವ್ರ ರಾಷ್ಟ್ರಭಾವದಿಂದ ಉಕ್ಕಿದ ಶಕ್ತಿಯುಳ್ಳ ನಾಯಕರಾಗಿ ಬೆಳಗಿದರು. ಕಿತ್ತೂರು ರಾಣಿ ಚನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣರ ಶೌರ್ಯ ಪರಂಪರೆಯು ಈ ಪ್ರದೇಶದ ಜನರ ಮನಸ್ಸಿನಲ್ಲಿ ರಾಷ್ಟ್ರಪ್ರೇಮದ ಬೆಂಕಿಯನ್ನು ಉರಿಯುವಂತೆ ಮಾಡಿತು. ಸ್ಥಳೀಯ ನಾಯಕರು ಜನರೊಂದಿಗಿನ ನಿಕಟ ಸಂಪರ್ಕದಿಂದ ಹೋರಾಟವನ್ನು ಸಾಮಾಜಿಕ ಚಳುವಳಿಯನ್ನಾಗಿ ಪರಿವರ್ತಿಸಿದರು. ಮಹಿಳೆಯರು ಸಹ ಈ ಹೋರಾಟದಲ್ಲಿ ಹಿಂಜರಿಯದೆ ಪಾಲ್ಗೊಂಡರು. ಖಾದಿ ತಯಾರಿಕೆ, ಪ್ರತಿಭಟನೆಗಳು, ವಂದೇಮಾತರಂ ಘೋಷಣೆಗಳು ಹಾಗೂ ಸಾಮಾಜಿಕ ಬದಲಾವಣೆಯ ಕಾರ್ಯಗಳಿಂದ ಅವರು ಹೋರಾಟದ ವೇಗವನ್ನು ಹೆಚ್ಚಿಸಿದರು. ಬೆಳಗಾವಿಯ ಮಹಿಳೆಯರು ರಾಷ್ಟ್ರಪ್ರೇಮವನ್ನು ಗೃಹದ ಅಂಗಳದಿಂದ ಬೀದಿಯವರೆಗೂ ವಿಸ್ತರಿಸಿದರು.

ಈ ಹೋರಾಟದ ಪರಿಣಾಮವಾಗಿ ಬೆಳಗಾವಿ ಜಿಲ್ಲೆಯಲ್ಲಿ ಹೊಸ ಸಾಮಾಜಿಕ ಜಾಗೃತಿ ಮೂಡಿತು. ಬ್ರಿಟಿಷ್ ಆಳ್ವಿಕೆಗೆ ವಿರುದ್ಧವಾಗಿ ರಾಷ್ಟ್ರೀಯ ಚಳುವಳಿ, ಸಾಮಾಜಿಕ ಸಮಾನತೆ, ಶಿಕ್ಷಣದ ಪ್ರಚಾರ ಮತ್ತು ಸ್ಥಳೀಯ ಸಂಸ್ಥೆಗಳ ಬಲವರ್ಧನೆಗೆ ದಾರಿಯಾದರು. ಸ್ವಾತಂತ್ರ್ಯ ನಂತರವೂ ಈ ಚಳುವಳಿಯ ಮೌಲ್ಯಗಳು ಕರ್ನಾಟಕದ ರಾಜಕೀಯ ಮತ್ತು ಸಾಮಾಜಿಕ ಬದುಕಿನಲ್ಲಿ ಸಿಲುಕಿಕೊಂಡಿದೆ. ಬೆಳಗಾವಿ ಹೋರಾಟಗಾರರು ತೋರಿಸಿದ ತ್ಯಾಗ, ಶಿಸ್ತು ಮತ್ತು ದೇಶಪ್ರೇಮ ಭಾರತದ ಸ್ವಾತಂತ್ರ್ಯ ಚಳುವಳಿಯ ಪ್ರಮುಖ ಅಧ್ಯಾಯವಾಗಿದೆ. ಅವರ ಹೋರಾಟವು 'ಮೌನದಿಂದ ಮುಂಚೂಣಿಗೆ' ಎಂಬ ನುಡಿಯ ಅರ್ಥವನ್ನು ನಿಜವಾಗಿ ಸಾರುತ್ತದೆ. ಇಂದಿನ ಪೀಳಿಗೆಗೆ ಈ ಹೋರಾಟಗಾರರ ಜೀವನವು ಪ್ರೇರಣೆಯ ಶಾಶ್ವತ ಮೂಲವಾಗಿದೆ. ಅವರು ತೋರಿಸಿದ ಮಾರ್ಗ ಅಹಿಂಸೆ, ಸತ್ಯ ಮತ್ತು ಸೇವಾಭಾವದ ಮಾರ್ಗ ಇಂದಿನ ಸಮಾಜದ ಶಾಂತಿ ಮತ್ತು ಪ್ರಗತಿಯ ಮೂಲಾಧಾರವಾಗಿದೆ. ಬೆಳಗಾವಿಯ ಜನರು ಮೌನದಿಂದ ಮುಂಚೂಣಿಗೆ ಬಂದಂತೆ ನಾವೂ ನ್ಯಾಯ, ಸಮಾನತೆ ಮತ್ತು ರಾಷ್ಟ್ರಸೇವೆಯ ದಾರಿಯಲ್ಲಿ ಮುನ್ನಡೆಯಬೇಕು ಎಂಬುದೇ ಇಲ್ಲಿಯ ಆಶಯವಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಶ್ರೀ. ಎಸ್. ವಾಯ್. ಹಂಜಿ : "ಸ್ವಾತಂತ್ರ್ಯ ಹೋರಾಟಗಾರ ಶ್ರೀ ಬಸವಪ್ರಭು ಕೋರೆಯವರು" ಪ್ರಸಾರಾಂಗ, ಕೆ.ಎಲ್.ಇ ಸಂಸ್ಥೆ, ಬೆಳಗಾವಿ. (2016)
2. ಶ್ರೀ. ಎಲ್. ಎಸ್. ಶಾಸ್ತ್ರಿ : "ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ" ಪ್ರಸಾರಾಂಗ, ಕೆ.ಎಲ್.ಇ ಸಂಸ್ಥೆ, ಬೆಳಗಾವಿ. (2016)
3. ಡಾ. ಸೂರ್ಯನಾಥ ಕಾಮತ್ : "ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು" ಗೀತಾ ಬುಕ್ ಹೌಸ್, ಮೈಸೂರು, 1980
4. ಪ್ರೊ. ಜಿ. ಬಿ. ನಾಯಕ : "ಕರ್ನಾಟಕ ಗ್ರಾಮ ಚರಿತ್ರೆ ಕೋಶ ಬೆಳಗಾವಿ ಜಿಲ್ಲಾ ಸಂಪುಟ ಭಾಗ-2" ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ(ಶಿಗ್ಗಾಂವಿ). (2017)
5. A Hand Book of KARNATAKA: Karnataka Gazetteer Department, Bengaluru. (2020)
6. Suryanath Kamath : "BELGAUM DISTRICT" Karnataka State Gazetteer, Bengaluru. (1987)
7. https://dssb.karnataka.gov.in/dssb/documents/docs/STATE%20FREEDOM%20FIGHTER%20JANUARY%202025%20BILLED%20PENSIONERS%20LIST.pdf



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.